**ಎಸ್.ಸಿ.ಸಂಖ್ಯೆಃ10035/2025**
**ಪ್ರಾ.ಸಾ.ಸಂಖ್ಯೆಃ 1**
**ಚಾ.ಸಾ.ಸಂಖ್ಯೆಃ 1**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಮಹಾದೇವಿ ತಳವಾರ |
| ತಂದೆಯ ಹೆಸರುಃ | ಕರಿಯಪ್ಪ |
| ವಯಸ್ಸುಃ | **23** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 18.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಚಾಸಾ-**6** ನನ್ನ ತಂದೆ, ಚಾಸಾ-**7** ನನ್ನ ತಾಯಿ. ಚಾಸಾ-**8** ಹಾಗೂ **9** ನನ್ನ ಅಣ್ಣಂದಿರು. ಚಾಸಾ-**10** ಹಾಗೂ **11** ನನ್ನ ಸಹೋದರಿಯರು. ಚಾಸಾ-**12** ನನ್ನ ಅಣ್ಣನ ಹೆಂಡತಿ. ನನಗೆ ಚಾಸಾ-**13** ರಿಂದ **17** ಇವರ ಪರಿಚಯವಿದೆ. **1** ನೇ ಆರೋಪಿ ಚೇತನ ಇವರನ್ನು ನಾನು **3** ವರ್ಷಗಳಿಂದ ಪ್ರೀತಿಸುತ್ತಿದ್ದೆ. ನಮ್ಮ ಹಾಗೂ ಆರೋಪಿತನ ಜಾತಿಗಳು ಬೇರೆ ಇರುವುದರಿಂದ ನಮ್ಮಿಬ್ಬರ ಪ್ರೀತಿಗೆ ನಮ್ಮ ಮನೆಯವರ ವಿರೋಧ ಇತ್ತು.

**2.** ನಮ್ಮ ಮನೆಯಲ್ಲಿ ನನಗೆ ಬೇರೆ ಮದುವೆ ಮಾಡುತ್ತೇವೆ ಅಂತ, **1** ನೇ ಆರೋಪಿನೊಂದಿಗಿನ ಪ್ರೀತಿಯನ್ನು ನಿಲ್ಲಿಸಬೇಕೆಂದು ಹೇಳಿದರು. ನಾನು **1** ನೇ ಆರೋಪಿತನಿಗೆ ಇದೇ ವಿಷಯವನ್ನು ಹೇಳಿ ನನ್ನ ತಂಟೆಗೆ ಬರಲಾರದಂತೆ ಹೇಳಿದೆ. ಅದಾದ ಎರಡು ದಿನಗಳ ನಂತರ ನಾನು ಮನೆಯಿಂದ ಕಾಲೇಜಗೆ ಹೊರಟಿದ್ದಾಗ, ಮಂಟೂರ ಗ್ರಾಮದ ಪೆಟ್ರೋಲ್ ಬಂಕ ಹತ್ತಿರ ಬೆಳಿಗ್ಗೆ **8-30** ಸಮಯದಲ್ಲಿ **1, 3, 4** ಹಾಗೂ **5** ನೇ ಆರೋಪಿತರು, ಚೇತನ, ಮಾನಿಂಗ, ಅನೀಲ ಮತ್ತು ವಿಠ್ಠಲ ಇವರೆಲ್ಲರೂ ನನಗೆ **1** ನೇ ಆರೋಪಿತನೊಂದಿಗೆ ಮಾತನಾಡದೇ ಇದ್ದಲ್ಲಿ ನನ್ನನ್ನು ಅಪಘಾತಪಡಿಸಿ ಕೊಲ್ಲುತ್ತೇವೆ ಅಂತ ಬೆದರಿಕೆ ಹಾಕಿದರು.

**3.** ನಾನು ಈ ವಿಷಯವನ್ನು ಅದೇ ದಿವಸ ಸಾಯಂಕಾಲ ನಮ್ಮ ತಾಯಿ-ತಂದೆಗೆ ಹೇಳಿದೆ. ನನ್ನ ತಂದೆ-ತಾಯಿ **1** ನೇ ಆರೋಪಿಯನ್ನು ಕರೆಯಿಸಿ ತಿಳಿಹೇಳಿದ್ದರು. ಇದಾದ **2-3** ದಿನಗಳ ನಂತರ **1** ನೇ ಆರೋಪಿತನು ನಾನು ಕೆಲಸ ಮಾಡುವ ಮುಧೋಳದ ಸಾಯಿ ಡ್ರೆಸ್ಸಸ್ ಎನ್ನುವ ಬಟ್ಟೆ ಅಂಗಡಿಗೆ ಸಾಯಂಕಾಲ **4-30** ಗಂಟೆಗೆ ಬಂದು ನಾನು ಆತನೊಂದಿಗೆ ಮಲಗಬೇಕು ಅಂತ, ಅವನು ಹೇಳಿದ ಹಾಗೆ ಕೇಳದೆ ಇದ್ದಲ್ಲಿ ನನ್ನನ್ನು ಕೊಲ್ಲುತ್ತೇನೆ ಅಂತ ಬೆದರಿಕೆ ಹಾಕಿದ. ನಾನು ಆತನಿಂದ ತಪ್ಪಿಸಿಕೊಂಡು ನಮ್ಮ ಊರಿಗೆ ಬಂದೆ.

**4.** ಅದಾದ ಎರಡು ದಿನಗಳ ನಂತರ ರಾತ್ರಿ **12-00** ಗಂಟೆ ಅವಧಿಯಲ್ಲಿ ನಾನು, ನನ್ನ ಅಕ್ಕ-ತಂಗಿಯರು, ತಂದೆ-ತಾಯಿ ಮನೆಯಲ್ಲಿ ಇದ್ದಾಗ ನಮ್ಮ ಮನೆಗೆ ಬಂದು ಬಾಗಿಲಿಗೆ ಪೆಟ್ರೋಲ್ ಉಗ್ಗಿ ಬೆಂಕಿ ಹಚ್ಚಿದ. ಆ ನಂತರ **1** ನೇ ಆರೋಪಿ ಒಂದು ತಿಂಗಳ ಕಾಲ ಊರು ಬಿಟ್ಟು ಹೋಗಿದ್ದ.

**5.** ನಂತರ ದಿ: **18.05.2023** ರಂದು ನಾನು ನನ್ನ ಅಕ್ಕ ನಿಂಗವ್ವ, ಲಕ್ಕವ್ವ ಚಾಸಾ-**10** ಮತ್ತು **11**, ನಮ್ಮ ಮನೆಯ ಅಂಗಳದಲ್ಲಿ ಮಲಗಿಕೊಂಡಿದ್ದೇವು. ಗಂಗಪ್ಪ ಹಾಗೂ ಮಂಜು ಚಾಸಾ-**8** ಹಾಗೂ **9** ಅಲ್ಲಿಯೇ ಕಟ್ಟೆಯ ಮೇಲೆ ಮಲಗಿಕೊಂಡಿದ್ದರು. ನನ್ನ ತಂದೆ-ತಾಯಿ ಕಟ್ಟೆಯ ಮೇಲೆ ಮಲಗಿದ್ದರು. ರಾತ್ರಿ **12-00** ಗಂಟೆಗೆ **1** ನೇ ಆರೋಪಿತನು ಬಂದು ಕಲ್ಲು ತೆಗೆದುಕೊಂಡು ನನ್ನ ತಲೆಗೆ ಬಲಗಣ್ಣಿನ ಮೇಲ್ಭಾಗಕ್ಕೆ ಹೊಡೆದ. ನನ್ನ ತಲೆಗೆ ರಕ್ತ ಬಂತು. ಆಗ ಆರೋಪಿ ಅಲ್ಲಿಂದ ಹೋಗಿ ಮತ್ತೇ ಸ್ವಲ್ಪ ಹೊತ್ತಿನಲ್ಲಿ ಬಂದು ಮತ್ತೆ ಕಲ್ಲು ತೆಗೆದುಕೊಂಡು ಬಂದು ಹೊಡೆದ.

**6.** ಆಗ ಅವನೊಂದಿಗೆ **3** ನೇ ಆರೋಪಿ ಅನೀಲ ಬಂದಿದ್ದ. ಅವರು ಮೋಟಾರ್ ಸೈಕಲ ಮೇಲೆ ಬಂದಿದ್ದರು. ಅದರ ನಂಬರ ಕೆಎ-**48X6006** ನೇದ್ದರ ಮೋಟಾರ್ ಸೈಕಲ ಮೇಲೆ ಬಂದಿದ್ದರು. ನಂತರ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದರು. ವೈದ್ಯರು ನನ್ನನ್ನು ಬಾಗಲಕೋಟೆಯ ಕೆರೂಡಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರು. ಆ ಪ್ರಕಾರ ನನ್ನನ್ನು ಬಾಗಲಕೋಟೆಯ ಕೆರೂಡಿಯ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ನಾನು **15** ದಿನಗಳ ಕಾಲ ಚಿಕಿತ್ಸೆ ಪಡೆದೆ.

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 1**
**ಚಾ.ಸಾ.ಸಂಖ್ಯೆಃ 1**

**7.** ಮರುದಿನ ಅಂದರೆ **19.05.2023** ರಂದು ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಆಗ ನಾನು ಈಗ ನೋಡುತ್ತಿರುವ ಪಿರ್ಯಾದಿ ನೀಡಿರುತ್ತೇನೆ. ಅದಕ್ಕೆ ನನ್ನ ಸಹಿ ಇದೆ. **(**ಅದನ್ನು ನಿಪಿ**-15** ಅಂತ**,** ಸಾಕ್ಷಿದಾರರ ಸಹಿಯನ್ನು ನಿಪಿ**-15(**ಎ**)** ಅಂತ ಗುರುತಿಸಲಾಯಿತು**).** ನನಗೆ ಚಿಕಿತ್ಸೆಗಾಗಿ ಎರಡುವರೆ ಲಕ್ಷ ಖರ್ಚಾಗಿದೆ. ಘಟನೆಯಲ್ಲಿ ನನ್ನ ಬಟ್ಟೆ, ತಲೆದಿಂಬಿಗೆ ರಕ್ತ ಹತ್ತಿತ್ತು. ಈಗ ನೋಡುತ್ತಿರುವ ಬಟ್ಟೆ ನನ್ನ ರಕ್ತ ಹತ್ತಿದ ಚೂಡಿದಾರ ಟಾಪ್ ಇರುತ್ತದೆ. **(**ಅದನ್ನು ಮುಮಾ**-1** ಅಂತ ಗುರುತಿಸಲಾಯಿತು**).** ಈಗ ನೋಡುತ್ತಿರುವ ಕಲ್ಲು ಆರೋಪಿ ನನಗೆ ಹೊಡೆಯಲು ಉಪಯೋಗಿಸಿದ ಕಲ್ಲು ಇರುತ್ತದೆ. **(**ಅದನ್ನು ಮುಮಾ**-2** ಅಂತ ಗುರುತಿಸಲಾಯಿತು**).** ಈಗ ನಾನು ನೋಡುತ್ತಿರುವ ತಲೆದಿಂಬು ಘಟನೆಯ ಸಂದರ್ಭದಲ್ಲಿ ನಾನು ಇಟ್ಟುಕೊಂಡಿದ್ದು ಇರುತ್ತದೆ. **(**ಅದನ್ನು ಮುಮಾ**-3** ಅಂತ ಗುರುತಿಸಲಾಯಿತು**).**

**8.** ಈಗ ನಾನು ನೋಡುತ್ತಿರುವ ಪೊಟೋಗಳಲ್ಲಿ ಕಂಡು ಬರುವ ಜಾಗೆ ನಮ್ಮ ಮನೆ ಹಾಗೂ ನಾವು ಮಲಗಿದ್ದ ಜಾಗೆ ಇರುತ್ತದೆ. **(**ಸದರಿ ಪೊಟೊಗಳಿಗೆ ಪ್ರಮಾಣ ಪತ್ರ ಇರುವುದನ್ನು ದೃಢಪಡಿಸಿಕೊಂಡು ಅವುಗಳನ್ನು ನಿಪಿ**-16** ರಿಂದ **19** ಅಂತ ಗುರುತಿಸಲಾಯಿತು**).**

**9.** ನಂತರ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರು. ಅಲ್ಲಿ ನಾನು ಈ ಘಟನೆಯ ಬಗ್ಗೆ ಹೇಳಿಕೆ ನೀಡಿದ್ದೇನೆ. ಅದಕ್ಕೆ ನನ್ನ ಸಹಿ ಇದೆ. **(**ಸದರಿ ಹೇಳಿಕೆಯನ್ನು ನಿಪಿ**-20** ಅಂತ**,** ಸಾಕ್ಷಿದಾರರ ಸಹಿಯನ್ನು ನಿಪಿ**-20(**ಎ**)** ಅಂತ ಗುರುತಿಸಲಾಯಿತು**).**

**ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:**

**1.** ನಾನು ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸವನ್ನು ಮಂಟೂರು ಗ್ರಾಮದಲ್ಲಿ ಮಾಡಿರುತ್ತೇನೆ. ಮುಧೋಳದಲ್ಲಿ **1** ಹಾಗೂ **2** ನೇ ವರ್ಷದ ಪಿ.ಯು.ಸಿ ಮುಗಿಸಿರುತ್ತೇನೆ. ನಾನು ಬಿ.ಎಸ್.ಡಬ್ಲು ಪದವಿಯನ್ನು ಪೂರ್ಣ ಮಾಡಿಲ್ಲ. ನಾನು ಎಲ್ಲಿಯೂ ಕೆಲಸ ಮಾಡಲಿಲ್ಲ. **1** ನೇ ಆರೋಪಿ ಮಂಟೂರು ಬಿಟ್ಟು ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. **2** ನೇ

ಆರೋಪಿ ಮುಂಬೈನಲ್ಲಿ ಇರುತ್ತಾರೆಂಬ ಸೂಚನೆಗೆ ಸಾಕ್ಷಿದಾರರು "ಬಂದು ಹೋಗಿ ಮಾಡುತ್ತಾರೆ" ಅಂತ ಹೇಳುತ್ತಾರೆ.

**2. 1** ನೇ ಆರೋಪಿತನ ಮನೆ ನಮ್ಮ ಮನೆಯಿಂದ **2-3** ಮನೆಗಳ ನಂತರ ಇದೆ. ನಮ್ಮ ಕುಟುಂಬದವರಿಗೂ ಹಾಗೂ ಆರೋಪಿ ನಂ. **1** ಇವರ ಕುಟುಂಬದವರಿಗೂ ದಾರಿಯ ಬಗ್ಗೆ ಜಗಳವಿತ್ತು ಎಂದರೆ ಸರಿಯಲ್ಲ. ನಾನು **1** ನೇ ಆರೋಪಿತನಿಗೆ ನಮ್ಮ ಪ್ರೀತಿಯನ್ನು ಮುಂದುವರೆಸುವುದು ಬೇಡ ಅಂತ ಹೇಳಿದ ನಂತರ ಅವನು ನಮಗೆ ಬೆದರಿಕೆ ಹಾಕಿದ ಬಗ್ಗೆ ದೂರು ನೀಡಿದ್ದೇನೆ. ಆ ಬಗ್ಗೆ ಪ್ರ.ವ.ವರದಿ ದಾಖಲಾಗಿಲ್ಲ.

**3.** ನಾನು ನೀರು ಕುಡಿಯಲು ಎದ್ದಾಗ ರಾತ್ರಿ **10-30** ಗಂಟೆಯಾಗಿತ್ತು. **1** ನೇ ಆರೋಪಿ ಕಲ್ಲು ಎಸೆಯಲು ಬಂದಾಗಲೇ ನಾನು ಅವರನ್ನು ನೋಡಿದೆ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-**2** ರಿಂದ ಆರೋಪಿ ಹಲ್ಲೆ ಮಾಡಿದ್ದಾನೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಸರ್ಕಾರಿ ಆಸ್ಪತ್ರೆಗೆ ನನ್ನ ಅಕ್ಕಂದಿರು, ಅಣ್ಣಂದಿರು ಸೇರಿಸಿದರು. ನಾವು ಆಸ್ಪತ್ರೆಗೆ ಹೋದಾಗ ರಾತ್ರಿ **12** ಅಥವಾ **12-30** ಗಂಟೆಯಾಗಿತ್ತು.

**4.** ಕೆರೂಡಿ ಆಸ್ಪತ್ರೆಯಲ್ಲಿ ನನ್ನ ದೂರನ್ನು ಬರೆದುಕೊಂಡ ಪೊಲೀಸರು ಯಾರು ಅಂತ ಹೇಳಲು ಬರುವುದಿಲ್ಲ. ದೂರಿನಲ್ಲಿನ ಯಾವುದೆ ಮಾಹಿತಿಯನ್ನು ನಾನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. **2** ನೇ ಆರೋಪಿಗೆ ಹಾಗೂ ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಹಾಗೂ **1** ನೇ ಆರೋಪಿತನ ಕುಟುಂಬದ ನಡುವೆ ದಾರಿಯ ಬಗ್ಗೆ ಜಗಳ ಇರುವುದರಿಂದ ಸುಳ್ಳು ಕಥೆ ಕಟ್ಟಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ. ಎಂದರೆ ಸರಿಯಲ್ಲ. **1** ನೇ ಆರೋಪಿ ಬಾಗಿಲಿಗೆ ಪೆಟ್ರೋಲ್ ಉಗ್ಗಿ ಬೆಂಕಿ ಹಚ್ಚಿದ್ದ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: ಉಳಿದ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**

**1.** ನಾನು ಪ್ರೀತಿಯ ಕಾರಣದಿಂದಾಗಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಪೊಲೀಸರೆ ನಿಪಿ-

**15** ನ್ನು ಬರೆದಿದ್ದು, ನಾನು ಕೇವಲ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ **3** ರಿಂದ **5** ನೇ ಆರೋಪಿತರು **1** ನೇ ಆರೋಪಿತನೊಂದಿಗೆ ಬಂದ ದಿವಸದ ತಾರೀಖು ನೆನಪಿಲ್ಲ. ಆ ಘಟನೆ ಪೆಟ್ರೋಲ್ ಬಂಕನ ಮುಂದಿನ ರಸ್ತೆಯಲ್ಲಿ ಆಗಿದೆ. ಸದರಿ ಜಾಗೆಯಲ್ಲಿ ಸಾಕಷ್ಟು ಜನದಟ್ಟನೆ ಇರುತ್ತದೆ ಎಂದರೆ ಸರಿ. ಆಗ ನಾನು ಅಕ್ಕ-ಪಕ್ಕದ ಜನರಿಗೆ ಅವರು ಬೆದರಿಕೆ ಹಾಕಿದ ವಿಷಯ ಹೇಳಿಲ್ಲ. ನನ್ನ ತಂದೆ-ತಾಯಿಗೆ ಹೇಳಿದ್ದೇನೆ.

**2.** ನಾನು ಹಾಗೂ ನನ್ನ ಸಹೋದರಿಯರು ಒಟ್ಟಿಗೆ ಮಲಗಿರುತ್ತೇವೆ. ಘಟನೆ ನಡೆದಿದೆ ಅಂತ ಹೇಳುವ ದಿವಸ ದೀಪ ಆರಿಸಿದ್ದೇವೋ ಇಲ್ಲವೋ ನೆನಪಿಲ್ಲ. ಆರೋಪಿ ಅನೀಲ ಮೋಟಾರ್ ಸೈಕಲನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಕತ್ತಲು ಇದ್ದುದ್ದರಿಂದ ಏನೂ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತ: ಮುಂದುವರೆದು ಲೈಟ್ ಇತ್ತು ಅಂತ ನುಡಿಯುತ್ತಾರೆ.

**3.** ನಾನು **1** ನೇ ಆರೋಪಿಯೊಂದಿಗೆ ಬಹಳಷ್ಟು ಪ್ರೀತಿ ಮಾಡಿದ್ದರಿಂದ ಆತನನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯಿಂದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರಿನಲ್ಲಿ ಬರೆಸಿದ ಮಾಹಿತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. **3** ರಿಂದ **5** ನೇ ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**